**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಲಯ, ಹೊಸನಗರ**

**ಸಿ.ಸಿ. ನಂ. 56/22019**

**ಚಾಸಾ–6 ಪ್ರಾಸಾ–6**

| | | |
|---|---|---|
| ಹೆಸರು | – | ನಾಗೇಂದ್ರ ಹೆಚ್.ಪಿ |
| ತಂದೆಯ ಹೆಸರು | – | ಪರ್ವತಪ್ಪ ಗೌಡ |
| ವಯಸ್ಸು | – | 44 ವರ್ಷ |
| ವೃತ್ತಿ | – | ವ್ಯವಸಾಯ |
| ವಾಸಸ್ಥಳ | – | ಕವರಿ ರಾವೆ ಗ್ರಾಮ. |

(ದಿನಾಂಕಃ **10.10.2024** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ಚಾಸ 1 ರವರ ಪರಿಚಯ ಇರುತ್ತದೆ. ದಿನಾಂಕಃ 19.11.2018 ರಂದು ಮದ್ಯಾಹ್ನ 12.30 ರ ಸಮಯದಲ್ಲಿ ಗಲಾಟೆ ಆಗಿರುತ್ತದೆ ಆದರೆ ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ನಾನು ಗಲಾಟೆಯನ್ನು ನೋಡಿರುವುದಿಲ್ಲ.

2. ಸದರಿ ವಿಚಾರವಾಗಿ ಪೊಲಿಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ಆರೋಪಿಗಳು ತಮ್ಮ ಮನಗೆ ಹೊಗುವಾಗ ಕತ್ತಿ ಮತ್ತು ದೊಣ್ಣೆಯನ್ನು ತೆಗೆದುಕೊಂಡು ಹೊಗುತ್ತಿದ್ದರು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು).

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ದಿನಾಂಕಃ 19.11.2018 ಮದಾಹ್ನ 2 ಗಂಟೆ ಸಮಯದಲ್ಲಿ ನಾನು, ಚಾಸ3 ಮತ್ತು ಚಾಸ4 ಮತ್ತು ಚಾಸ5 ರವರು ಚಾಸ1 ರವರ ಮನಯ ಮುಂದೆ ಇರುವ ರಸ್ತೆಯಲ್ಲಿ ಹೊಗುತ್ತಿದ್ದಾಗ ಚಾಸ1 ರವರು ತಮ್ಮ ಮನೆಯ ಮುಂದೆ ಇರುವ ಬಗರ್ ಹುಕಂ ಬೇಲಿಯನ್ನು ಕಟ್ಟುತ್ತಿದ್ದರು ಎಂದರೆ ಸರಿಯಲ್ಲ.

2. ಆ ಸಂದರ್ಬದಲ್ಲಿ ಆರೋಪಿ 1 ರವರ ಕೈಯಲ್ಲಿ ಕಬ್ಬಿಣದ ಕತ್ತಿ ಮತ್ತು ದೊಣ್ಣೆಯನ್ನು ಹಿಡಿದುಕೊಂಡು ಬಂದು ಚಾಸ 1 ರವರಿಗೆ ಬೋಳಿಮಗನೇ ಸೂಳೆ ಮಗನೇ ನಿನ್ನ ಮನೆಗೆ ರಸ್ತೆ ಬೇಕಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ.

3. ಆರೋಪಿ 1 ರವರು ತನ್ನ ಕೈಯಲ್ಲಿದ್ದ ಎಂ.ಒ 2 ರಿಂದ ಚಾಸ1 ರವರ ಎಡ ಕೈಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

5. ಆಗ ಚಾಸ1 ರವರು ಜೊರಾಗಿ ಕೂಗಿಕೊಂಡು ನೆಲದ ಮೇಲೆ ಬಿದ್ದಿರುತ್ತಾರೆ ಎಂದರೆ ಸರಿ. ಆರೋಪಿ 2 ರವರು ಚಾಸ 1 ರವರ ಮೈ ಕೈ ಮತ್ತು ಬೆನ್ನಿನ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

6. ಇಬ್ಬರೂ ಆರೋಪಿಗಳು ಚಾಸ1 ರವರ ಮೈಕೈ ಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

7. ಆಗ ನಾನು, ಚಾಸ2 ರಿಂದ ಚಾಸ4 ಮತ್ತು ಚಾಸ6 ರವರು ಘಟನಾ ಸ್ಥಳಕ್ಕೆ ಹೋಗಿ ಆರೋಪಿ 1 ಮತ್ತು 2 ಮತ್ತು ಚಾಸ1 ರವರು ಮಧ್ಯ ಆದ ಗಲಾಟೆಯನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ.

8. ನಾನು ಆಗೋಪಿಗಳು ಮತ್ತು ಚಾಸ1 ರವರು ಮಧ್ಯ ಆದ ಸಂಪೂರ್ಣ ಗಲಾಟೆಯನ್ನು ನೋಡಿರುತ್ತೆನೆ ಎಂದರೆ ಸರಿಯಲ್ಲ.

11. ನನಗೆ ಎಲ್ಲಾ ಘಟನೆಯ ಸಂಗತಿಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ದಿನಾಂಕಃ 20.11.2018 ರಂದು ಈಗ ನನಗೆ ಓದಿ ಹೇಳಿದ ಹೇಳಿಕೆಯನ್ನು ಪೊಲಿಸರ ಮುಂದೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ7 ಎಂದು ಗುರುತಿಸಲಾಯಿತು.

13. ಚಾಸ 1 ರವರು ನಮ್ಮ ಮನೆಯ ಪಕ್ಕದವರು ಆಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಗಳಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಡಿ.ಎನ್.ಹೆಚ್ ರವರಿಂದಃ**

**ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.